FEBRUARY 28, 2026

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಪಶು ಸಂಗೋಪನೆ,** ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬು – ರಾಜ್ಯಪಾಲ ಥಾವರಚಂದ್ ಗೆಹ್ಲೋಟ್.

**ಹುಬ್ಬಳ್ಳಿ–ಧಾರವಾಡ, ಮೈಸೂರು ಹಾಗೂ ಮಂಗಳೂರಿನಲ್ಲಿ,** 'ಸೆಂಟರ್ ಆಫ್ ಎಕ್ಸಲೆನ್ಸ್' ಕೇಂದ್ರಗಳ ಸ್ಥಾಪನೆ – ಮುಖ್ಯಮಂತ್ರಿ.

**ಇಂದು ರಾಷ್ಟ್ರೀಯ** ವಿಜ್ಞಾನ ದಿನಾಚರಣೆ; ವಿಜ್ಞಾನ ಕ್ಷೇತ್ರದಲ್ಲಿ, ಮಹಿಳೆಯರ ಕೊಡುಗೆಯ ಸ್ಮರಣೆ.

**ಸಂಸದರ ಕ್ರೀಡಾ ಮಹೋತ್ಸವ;** ಧಾರವಾಡದ ಕೆ.ಸಿ.ಡಿ. ಮೈದಾನದಲ್ಲಿ, ಯಶಸ್ವಿ ಸಂಪನ್ನ.

<><><>

**ಈಗ ವಾರ್ತೆಗಳ ವಿವರ**

<><><>

**ಪಶು ಸಂಗೋಪನೆ,** ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿದೆ. ಭಾರತ, ಹಾಲು ಹಾಗೂ ಮೀನು ಉತ್ಪಾದನೆಯಲ್ಲಿ, ಮುಂಚೂಣಿಯಲ್ಲಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹೇಳಿದ್ದಾರೆ. ಬೀದರ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯದ, 15ನೇ ಘಟಿಕೋತ್ಸವದಲ್ಲಿ, ಪದವಿ ಪ್ರದಾನ ಮಾಡಿ, ಅವರು ಮಾತನಾಡಿದರು. ಪಶು ಸಂಗೋಪನೆ ಖಾತೆ ಸಚಿವ, ಕೆ.ವೆಂಕಟೇಶ ಮಾತನಾಡಿ, ರಾಜ್ಯದಲ್ಲಿ 2 ಕೋಟಿ 9 ಲಕ್ಷ ಜಾನುವಾರುಗಳಿವೆ. ಹಾಲು ಉತ್ಪಾದನೆಯಲ್ಲಿ ಕರ್ನಾಟಕ ದೇಶಕ್ಕೆ 2ನೇ ಸ್ಥಾನದಲ್ಲಿದೆ ಎಂದರು. ಉಡುಪಿ ವಿದ್ಯಾರ್ಥಿನಿ ಖುಷಿ ಮೆಂಡನ್, ಶಿವಮೊಗ್ಗ ಪಶು ವೈದ್ಯಕೀಯ ಕಾಲೇಜಿನ ಬಿ.ವಿ.ಎಸ್ಸಿ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ನೊಂದಿಗೆ, 16 ಚಿನ್ನದ ಪದಕಗಳನ್ನು ಪಡೆದರು. ಪ್ರದೇಶ ಸಮಾಚಾರಕ್ಕಾಗಿ ಖುಷಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಖುಷಿ ಮೆಂಡನ್ ಧ್ವನಿ – 36 ಸೆಕೆಂದುಗಳು**

<><><>

**ಹುಬ್ಬಳ್ಳಿ-ಧಾರವಾಡ, ಮೈಸೂರು ಹಾಗೂ ಮಂಗಳೂರಿನಲ್ಲಿ,** 'ಸೆಂಟರ್ ಆಫ್ ಎಕ್ಸಲೆನ್ಸ್' ಕೇಂದ್ರಗಳನ್ನು ಸ್ಥಾಪಿಸಿ, ಪ್ರಾದೇಶಿಕ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವುದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಏಳನೇ ಆವೃತ್ತಿಯ ಜಿ.ಎಫ್.ಎಕ್ಸ್ ಕಾರ್ಯಕ್ರಮವನ್ನು, ಬೆಂಗಳೂರಿನಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಐ.ಟಿ.ಐ. ಮತ್ತು ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ, ಎನಿಮೇ ’ನ್ ಮತ್ತು ಗೇಮಿಂಗ್ ಬಗ್ಗೆ, ವಿಶೇ ’ ತರಬೇತಿ ನೀಡಲು, ಸರ್ಕಾರ ಬದ್ಧವಾಗಿದೆ ಎಂದರು. ಮೂರು ದಿನಗಳ, ಜಿ.ಎಫ್.ಎಕ್ಸ್ ಸಮಾವೇಶದಲ್ಲಿ, ಕಲಾವರ್ಸೆ ಪೆವಿಲಿಯನ್, ರಾಜ್ಯದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುತ್ತಿದ್ದು, ವೀಕ್ಷಕರ ಗಮನವನ್ನು ಸೆಳೆಯುತ್ತಿದೆ.

<><><>

**ಬೀದರ ಜಿಲ್ಲೆ, ಬಸವ ಕಲ್ಯಾಣದಲ್ಲಿ,** 'ವಚನ ವಿಶ್ವವಿದ್ಯಾಲಯ' ಸ್ಥಾಪಿಸುವಂತೆ, ನಾಡಿನ ವಿವಿಧ ಮಠಾಧೀಶರ ನಿಯೋಗದೊಂದಿಗೆ, ಕೈಗಾರಿಕೆಗಳ ಖಾತೆ ಸಚಿವ, ಎಂ.ಬಿ.ಪಾಟೀಲ, ಮುಖ್ಯಮಂತ್ರಿ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ, ಮನವಿ ಸಲ್ಲಿಸಿದರು. ನಾಡೋಜ ಬಸವಲಿಂಗ ಪಟ್ಟದ್ದೇವರು, ತೋಂಟದ ಸಿದ್ಧರಾಮ ಸ್ವಾಮೀಜಿ, ಶ್ರೀ ಗುರುಮಹಾಂತ ಸ್ವಾಮೀಜಿ, ಶ್ರೀ ಪ್ರಭು ಚನ್ನಬಸವ ಸ್ವಾಮೀಜಿ ಹಾಗೂ ಬೀದರ ಜಿಲ್ಲೆ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ನಿಯೋಗದಲ್ಲಿದ್ದರು. ಬಳಿಕ ಮಾತನಾಡಿದ ಸಚಿವ ಎಂ.ಬಿ. ಪಾಟೀಲ, ಶರಣರ ವಚನಗಳಲ್ಲಿನ ಮಾನವೀಯ ಹಾಗೂ ಸಾಮಾಜಿಕ ಆಶಯಗಳನ್ನು ಜಾಗತಿಕ ಮಟ್ಟದಲ್ಲಿ ವಿಸ್ತರಿಸಲು, 'ವಚನ ವಿಶ್ವವಿದ್ಯಾಲಯ' ಸ್ಥಾಪನೆಯ ಅಗತ್ಯತೆ ಬಗ್ಗೆ, ಮುಖ್ಯಮಂತ್ರಿಯವರ ಗಮನ ಸೆಳೆಯಲಾಗಿದೆ ಎಂದರು.

<><><>

**ಬಳ್ಳಾರಿ ಜಿಲ್ಲೆ, ಸಂಡೂರಿನಲ್ಲಿ ಸ್ಕಿಲ್ ಪಾರ್ಕ್ ಸ್ಥಾಪನೆಗೆ,** 50 ಎಕರೆ ಜಾಗೆ ಗುರುತಿಸಲಾಗಿದೆ; ಕೆ.ಎಂ.ಆರ್.ಸಿ ಅನುಮೋದನೆ ಸಹ ದೊರೆತಿದೆ ಎಂದು, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಖಾತೆ ಸಚಿವ, ಶರಣಪ್ರಕಾಶ ಪಾಟೀಲ ತಿಳಿಸಿದ್ದಾರೆ. ಕಲಬುರಗಿಯ, ಜಯದೇವ ಹೃದಯ ಆರೋಗ್ಯ ಆಸ್ಪತ್ರೆಗೆ ಭೇಟಿ ನೀಡಿ, ಮಾತನಾಡಿದ ಅವರು, ರಾಯಚೂರಿನಲ್ಲಿ ಕ್ಯಾನ್ಸರ್ ಚಿಕಿತ್ಸೆ ಆಸ್ಪತ್ರೆ ಮತ್ತು ಟ್ರಾಮಾ ಕೇರ್ ಸೆಂಟರ್, ಬೀದರ ನಲ್ಲಿ ಡಯಾಲಿಸಿಸ್ ಚಿಕಿತ್ಸೆ ಘಟಕ ಹಾಗೂ ಬಳ್ಳಾರಿಯಲ್ಲಿ ಕ್ಯಾನ್ಸರ್ ಚಿಕಿತ್ಸೆ ಆಸ್ಪತ್ರೆ ನಿರ್ಮಾಣಕ್ಕೆ, ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದರು. ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ, ಮಲ್ಟಿ ಸ್ಕಿಲ್ ಡೆವಲೆಪಮೆಂಟ್ ಸೆಂಟರ್ ತಾತ್ಕಾಲಿಕ ತೆರೆದು ತರಬೇತಿ ನೀಡುತ್ತಿದ್ದು, 120 ಕೋಟಿ ರೂಪಾಯಿ ವೆಚ್ಚದಲ್ಲಿ 25 ಎಕರೆ ಪ್ರದೇಶದಲ್ಲಿ, ಹೊಸದಾಗಿ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಎಂದು, ಸಚಿವರು ಹೇಳಿದರು.

<><><>

**ಬೆಳಗಾವಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ** ಬಿ.ಆರ್. ಅಂಬೇಡ್ಕರ ತರಬೇತಿ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಆಶ್ರಯದಲ್ಲಿ, 'ವಿವೇಚನೆ, ವೈಚಾರಿಕತೆ ಮತ್ತು ಗಣರಾಜ್ಯ: ಬಿ. ಆರ್. ಅಂಬೇಡ್ಕರ' ವಿಷಯದ, ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿತವಾಗಿದೆ. ಹೆಸರಾಂತ ರಾಜ್ಯಶಾಸ್ತ್ರಜ್ಞ ರಾಜೀವ ಭಾರ್ಗವ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಬಾಬಾಸಾಹೇಬ ಅಂಬೇಡ್ಕರ ಅವರ ದೃಷ್ಟಿಕೋನ, ದೇಶದ ಸಾರ್ವಜನಿಕ ಜೀವನವನ್ನು ರೂಪಿಸುವಲ್ಲಿ, ನಿರ್ಣಾಯಕ ಪಾತ್ರ ವಹಿಸಿದೆ. ಶಿಕ್ಷಣದ ಮೂಲಕ, ಸಾಮಾಜಿಕ ಪಿಡುಗು, ಜಾತಿ ತಾರತಮ್ಯ ಹೋಗಲಾಡಿಸಲು, ಅವರು ಶ್ರಮಿಸಿದ್ದಾರೆ ಎಂದರು.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಇಂದು, ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ವಿಜೇತ** ಭಾರತದ ವಿಜ್ಞಾನಿ, ಸರ್ ಸಿ.ವಿ ರಾಮನ್ ಅವರು, ತಮ್ಮ ಸಂಶೋಧನೆ 'ರಾಮನ್ ಪರಿಣಾಮ'ವನ್ನು ಮಂಡಿಸಿದ ದಿನವಾಗಿದ್ದು, 'ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು; ವಿಕಸಿತ ಭಾರತದ ವೇಗವರ್ಧಕರು' ಎಂಬ ಧ್ಯೇಯದೊಂದಿಗೆ, ರಾಷ್ಟ್ರೀಯ ವಿಜ್ಞಾನ ದಿನ, ಆಚರಿಸಲಾಗುತ್ತಿದೆ. ರಾಜ್ಯದ ಎಲ್ಲ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ, ವೈಜ್ಞಾನಿಕ ಮನೋಭಾವ ಹಾಗೂ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು, ಮಕ್ಕಳಿಗೆ ಪ್ರತಿಜ್ಞಾ ವಿಧಿ ಸ್ವೀಕರಿಸಿ, ರಾಷ್ಟ್ರೀಯ ವಿಜ್ಞಾನ ದಿನ, ಆಚರಿಸಲಾಗುತ್ತಿದೆ.  ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ, ವಿಜ್ಞಾನ ಸಂಭ್ರಮದ ಹಿನ್ನೆಲೆ, ಇಂದು ಬೆಳಗ್ಗೆ 10.30ಕ್ಕೆ, ಬೆಂಗಳೂರಿನ ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ, ಪ್ರೊಫೆಸರ್ ಶಿವಾನಂದ ಕಣವಿ, 'ಕ್ವಾಂಟಮ್ ಶತಮಾನೋತ್ಸವ ಹಾಗೂ ಬಗೆಹರಿಯದ ಜಿಜ್ಞಾಸೆ' ಕುರಿತು ಮಾತನಾಡಲಿದ್ದಾರೆ.

<><><>

**ರಾಜ್ಯ ಸಂಸದೀಯ ಸಮಿತಿ ಸಭೆಯಲ್ಲಿ,** ಒಟ್ಟು 56 ಸಾವಿರ ಹುದ್ದೆಗಳ ನೇಮಕಾತಿಗೆ ನಿರ್ಧರಿಸಿರುವುದು, ಆಕಾಂಕ್ಷಿಗಳಲ್ಲಿ ಆಶಾಭಾವ ಮೂಡಿಸಿದೆ ಎಂದು, ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ, ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಆದ ಷ್ಟು ಬೇಗ, ನೇಮಕಾತಿ ಅಧಿಸೂಚನೆ ಹೊರಡಿಸಬೇಕು; ಭ್ರಷ್ಟಾಚಾರ ರಹಿತ, ಪಾರದರ್ಶಕ ನೇಮಕಾತಿ ಪಕ್ರಿಯೆಗೆ, ರಾಜ್ಯ ಸರ್ಕಾರ ಆದ್ಯತೆ ನೀಡಬೇಕು ಎಂದರು.

<><><>

**ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆ-1 ಇಂದಿನಿಂದ** ಆರಂಭವಾಗಲಿದೆ. ಇಂದು ಕನ್ನಡ, ಅರೆಬಿಕ್ ಭಾ ಾ ಪರೀಕ್ಷೆಗಳು ನಡೆಯಲಿವೆ. ಮಾರ್ಚ್ 17ರ ವರೆಗೆ ಪರೀಕ್ಷೆಗಳು ನಡೆಯಲಿವೆ. ಈ ಬಾರಿ 5 ಸಾವಿರದ ನೂರಾ 74 ಮಹಾವಿದ್ಯಾಲಯಗಳ, 7 ಲಕ್ಷ 10 ಸಾವಿರದ 3 ನೂರಾ 63 ವಿದ್ಯಾರ್ಥಿಗಳು, ಹೆಸರು ನೋಂದಾಯಿಸಿದ್ದಾರೆ. ರಾಜ್ಯದ ಒಟ್ಟು ಸಾವಿರದ ಇನ್ನೂರಾ 17 ಪರೀಕ್ಷಾ ಕೇಂದ್ರದಲ್ಲಿ, ಪರೀಕ್ಷೆ ನಡೆಯಲಿದೆ. ಪ್ರತಿ ಪರೀಕ್ಷಾ ಕೇಂದ್ರದಲ್ಲಿ, ಪಾರದರ್ಶಕ ಪರೀಕ್ಷೆ ನಡೆಸಲು, ಸಿ.ಸಿ. ಟಿವಿ ಕ್ಯಾಮೆರಾ ಅಳವಡಿಸಲಾಗಿದೆ.

<><><>

**ಗದಗ ಜಿಲ್ಲಾಡಳಿತ ಭವನದಲ್ಲಿ,** ಜನತಾ ದರ್ಶನದಲ್ಲಿ ಪಾಲ್ಗೊಂಡ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ, ಜನರ ಅಹವಾಲು ಹಾಗೂ ಸಮಸ್ಯೆಗಳನ್ನು ಆಲಿಸಿದರು. ಕಂದಾಯ ಇಲಾಖೆಗೆ ಸಂಬಂಧಿಸಿದ, 135 ಅರ್ಜಿಗಳು ಸೇರಿದಂತೆ, ಒಟ್ಟು 300 ಅರ್ಜಿಗಳು ಸಲ್ಲಿಕೆಯಾಗಿದ್ದು, ಆ ಪೈಕಿ,   ನೂರಾ 88 ಅರ್ಜಿಗಳಿಗೆ ಪರಿಹಾರ ದೊರತಿದೆ ಎಂದರು.

<><><>

**ಖೇಲೋ ಇಂಡಿಯಾ, ಫಿಟ್ ಇಂಡಿಯಾ ಧ್ಯೇಯದ,** ಸಂಸದರ ಕ್ರೀಡಾ ಹಾಗೂ ಸಾಂಸ್ಕೃತಿಕ ಮಹೋತ್ಸವದ ಅಂಗವಾಗಿ, ಧಾರವಾಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯ, ಕೆ.ಸಿ.ಡಿ. ಮೈದಾನದಲ್ಲಿ, ಸಂಸದ ಪ್ರಲ್ಹಾದ ಜೋಶಿ ಆಯೋಜಿಸಿದ್ದ, ಮಹಿಳಾ ವಿಭಾಗದ ಕಬಡ್ಡಿ ಪಂದ್ಯದಲ್ಲಿ, ಹೊಸಳ್ಳಿಯ ನವರಂಗ ಹಾಗೂ ಶಿಗ್ಗಾಂವಿ ತಂಡ, ಖೋ-ಖೋ ದಲ್ಲಿ ಬೈರಿದೇವರಕೊಪ್ಪದ,

ಎಸ್.ಜೆ.ಎಸ್.ಎಸ್. ಹಾಗೂ ಹುಬ್ಬಳ್ಳಿ ತಂಡ ಮತ್ತು ವಾಲಿಬಾಲ್ ಪಂದ್ಯದಲ್ಲಿ, ಬ್ಯಾಹಟ್ಟಿ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದವು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿಜೇತರನ್ನು ಅಭಿನಂದಿಸಿ, ವಿನ್ನರ್ ಹಾಗೂ ರನ್ನರ್–ಅಪ್ ತಂಡಗಳಿಗೆ ಬಹುಮಾನ ನೀಡಿದರು.

<><><>

**ಬೀದರ ಜಿಲ್ಲೆ, ನೌಬಾದ್ ಸುತ್ತಲಿನಲ್ಲಿ,** 80 ಕುಟುಂಬಗಳು, ಗುಡಿಸಲಿನಲ್ಲಿ ವಾಸವಾಗಿದ್ದು, 2 ಎಕರೆ ಪ್ರದೇಶದಲ್ಲಿ, ಖಾಯಂ ಸೂರು ಕಲ್ಪಿಸಲು, ಸಮಾಜ ಕಲ್ಯಾಣ ಖಾತೆ ಸಚಿವ, ಎಚ್.ಸಿ.ಮಹಾದೇವಪ್ಪ ಅವರೊಂದಿಗೆ ಸಮಾಲೋಚಿಸಿ, ವರದಿ ಸಲ್ಲಿಸುವುದಾಗಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷ ಎಲ್. ಮೂರ್ತಿ ತಿಳಿಸಿದ್ದಾರೆ. ನೌಬಾದ್ ಸಮೀಪದ, ಚೌಳಿ ಕಮಾನ್, ಸಿಂಧೋಳ ಹಾಗೂ ಮಾಂಗರವಾಡಿಯ ಅಲೆಮಾರಿ ಸಮುದಾಯಗಳನ್ನು ಭೇಟಿ ಮಾಡಿ, ಅವರು ಮಾತನಾಡಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಪಶು ಸಂಗೋಪನೆ,** ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬು – ರಾಜ್ಯಪಾಲ ಥಾವರಚಂದ್ ಗೆಹ್ಲೋಟ್.

**ಹುಬ್ಬಳ್ಳಿ–ಧಾರವಾಡ, ಮೈಸೂರು ಹಾಗೂ ಮಂಗಳೂರಿನಲ್ಲಿ,** 'ಸೆಂಟರ್ ಆಫ್ ಎಕ್ಸಲೆನ್ಸ್' ಕೇಂದ್ರಗಳ ಸ್ಥಾಪನೆ – ಮುಖ್ಯಮಂತ್ರಿ.

**ಇಂದು ರಾಷ್ಟ್ರೀಯ** ವಿಜ್ಞಾನ ದಿನಾಚರಣೆ; ವಿಜ್ಞಾನ ಕ್ಷೇತ್ರದಲ್ಲಿ, ಮಹಿಳೆಯರ ಕೊಡುಗೆಯ ಸ್ಮರಣೆ.

**ಸಂಸದರ ಕ್ರೀಡಾ ಮಹೋತ್ಸವ;** ಧಾರವಾಡದ ಕೆ.ಸಿ.ಡಿ. ಮೈದಾನದಲ್ಲಿ, ಯಶಸ್ವಿ ಸಂಪನ್ನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>